# PHARMACY COUNCIL OF INDIA

(Constituted under the Pharmacy Act, 1948)

E-MAIL : pcipresident@gmail.com
WEBSITE : www.pci.nic.in
TELEPHONE : 011-61299900, 61299901
: 011-61299902, 61299903, 61299904

NBCC Centre, 3rd Floor,
Plot No.2, Community Centre
Maa Anandamai Marg
Okhla Phase I
New Delhi – 110 020

Ref. No. PCI-3444/2019-PCI/D/2019-20

25 JUN 2019

**Approval Letter**

**Email**

The Principal
Late Sri Veerbhadrappa Devarkal Education Trust
601/2. Chittapur Road, Near Mini Vidhana
Soudha, YADGIR
**(Karnataka)**
**Email :** lsvdeducationtrust@gmail.com

The Member Secretary
O/o the Board of Examining Authority,
State of Karnataka,
IIIrd Floor, Govt. College of
Pharmacy, No-2, Subbaiah Circle,
Dr. P. Kalinga Rao Road,
Bangalore - 560 027(Karnataka)

**Sub: PCI approval letter**

Sir/ Madam

With reference to the subject cited above. I am directed to convey the decision of PCI as under–

| Institute Name | State | Institute ID | Courses Applied for | Decision of the PCI |
|---|---|---|---|---|
| Late Sri Veerbhadrappa Devarkal Education Trust Yadgir | Karnataka | PCI-3444 online IR | D.Pharm | Approval for 2019-2020 for conduct of 1st year for 60 admissions For D.Pharm * |

* For D.Pharm Course and Pharm.D Course- It was further decided that –

a) above approval is subject to submission of –

i) consent of affiliation of Examining Authority for starting of the above pharmacy course(s) before making admission.

ii) appointment of the Principal and teaching staff as per the qualification and experience prescribed under "Minimum Qualification for Teachers in Pharmacy Institutions Regulations, 2014" failing which no admission shall be made.

b) in case the above document/(s) are not obtained and compliance is not submitted to PCI before making admissions, the above approval granted by the PCI shall be deemed to be withdrawn and the consequences thereof shall rest on the institution and PCI in no way shall be responsible for it.

This is for information.

Yours faithfully

Pratima

**Pratima Tiwari**
**Assistant Secretary**

Principal
Shri Veerbhadrappa Devarkal
College Of D-Pharmacy Yadgir-585202

**GOVERNMENT OF KARNATAKA**
(DRUGS CONTROL DEPARTMENT)
ಪರೀಕ್ಷಾ ಪ್ರಾಧಿಕಾರ ಮಂಡಳಿ (ಡಿ.ಫಾರ್ಮ), ಬೆಂಗಳೂರು
**BOARD OF EXAMINING AUTHORITY (D.PHARM)**
C/o Government College of Pharmacy, No. 2, 3rd Floor, P Kalingarao Road, Subbaiah Circle, Bangalore-27
email: bea.dcd-ka@nic.in, beadpharmacy@yahoo.com Phone: 080- 22483465, 080- 22223466
website: www.beadpharmacy.org

No. DCD/BEA/PCI/ 198/2019-20 | 421 Date: 23.07.2019

To,

**The Registrar – cum – Secretary,**
**PHARMACY COUNCIL OF INDIA,**
**Combined Councils Building,**
**Temple Lane, Kotla Road,**
**Aiwan-E-Ghalib Marg, Post Box No. 7020,**
**NEW DELHI – 110 002.**

Sir,

Sub: Request of Shri Veerbhadrappa Devarkal Education Trust's College of Pharmacy at Survey No. 601/2, Near Mini Vidhanasoudha, Chittapur Road, Yadgir, to issue **"No Objection letter"** from the Board of Examining Authority, Bangalore to conduct D. Pharm Exam. – reg.

Ref:
1) Government Order No. HFW/325/PTD/2018 dated 22.07.2019 of Govt. of Karnataka, Health and Family Welfare Department, Bangalore.
2) Letter dated 23.07.2019 of Shri Veerbhadrappa Devarkal Education Trust, Yadgir
3) PCI 's Approval Letter No. PCI-3444/2019/PCI-D/3019-20 dated 25.06.2019

*****

With reference to the above subject, in view of the affiliation given by the Govt. of Karnataka vide Order cited under reference (1) above to start D. Pharm Course for the academic year 2019-20 ( Copy enclosed), the Board of Examining Authority, Bangalore has "**no objection**" to conduct D. Pharm examination of **Shri Veerbhadrappa Devarkal Education Trust's College of Pharmacy at Survey No. 601/2, Near Mini Vidhanasoudha, Chittapur Road, Yadgir for the academic year 2019-20 for the intake of 60 students for the 1st Year D. Pharm Course.**

With regards to the above subject, the said Institution shall comply with the conditions specified in the aforesaid Government Order and the Institution shall provide all facilities, teaching faculties and other requirements as prescribed by the Pharmacy Council of India, before the commencement of D. Pharm course and approval by the Pharmacy Council of India, New Delhi.

Yours faithfully,

(UMESH.S)
Member Secretary
Board of Examining Authority,
Drugs Control Department,
Bangalore.

Copy Submitted to

1. The Drugs Controller for the State of Karnataka, Palace Road, Bangalore for information.
2. The President , Shri Veerbhadrappa Devarkal Education Trust, Yadgir for necessary action.

Scanned with CamScanner

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ವೀರಭದ್ರಪ್ಪ ದೇವರ್ಕಲ್ ಎಜುಕೇಷನ್ ಟ್ರಸ್ಟ್ (ರಿ), ಯಾದಗಿರಿ ಇವರು ಶ್ರೀ ವೀರಭದ್ರಪ್ಪ ದೇವರ್ಕಲ್ ಎಜುಕೇಷನ್ ಟ್ರಸ್ಟ್‌ನ ಕಾಲೇಜ್ ಆಫ್ ಫಾರ್ಮಸಿ ಎಂಬ ಹೆಸರಿನಲ್ಲಿ ಹೊಸದಾಗಿ ಡಿ.ಫಾರ್ಮಸಿ ಕೋರ್ಸ್ ಪ್ರಾರಂಭಿಸಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ:
1. ಅಧ್ಯಕ್ಷರು, ಶ್ರೀ ವೀರಭದ್ರಪ್ಪ ದೇವರ್ಕಲ್ ಎಜುಕೇಷನ್ ಟ್ರಸ್ಟ್ (ರಿ), ಯಾದಗಿರಿ ಇವರ ಮನವಿ ಪತ್ರ ಸಂಖ್ಯೆ:SVDET/01/18-19, ದಿನಾಂಕ:19.11.2018.
2. ಔಷಧ ನಿಯಂತ್ರಕರು (ಪ್ರ), ಔಷಧ ನಿಯಂತ್ರಣ ಇಲಾಖೆ, ಬೆಂಗಳೂರು ಇವರ ವರದಿ ಸಂಖ್ಯೆ:ಔನಿಇ/192/ಯೋಜನೆ/2018–19, ದಿನಾಂಕ: 04.05.2019.
3. ದಿನಾಂಕ:16.05.2019ರಂದು ನಡೆದ ಉನ್ನತ ಮಟ್ಟದ ಸಮಿತಿ ಸಭೆಯ ನಡವಳಿಗಳು.

***

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರ.ಸಂ (1)ರ ಮನವಿ ಪತ್ರದಲ್ಲಿ, ಅಧ್ಯಕ್ಷರು, ಶ್ರೀ ವೀರಭದ್ರಪ್ಪ ದೇವರ್ಕಲ್ ಎಜುಕೇಷನ್ ಟ್ರಸ್ಟ್ (ರಿ), ಮಿನಿ ವಿಧಾನ ಸೌಧದ ಹತ್ತಿರ, ಚಿತ್ತಾಪುರ ರಸ್ತೆ, ಯಾದಗಿರಿ ಇವರು ತಮ್ಮ ಟ್ರಸ್ಟ್ ವತಿಯಿಂದ ಯಾದಗಿರಿಯಲ್ಲಿ ಶ್ರೀ ವೀರಭದ್ರಪ್ಪ ದೇವರ್ಕಲ್ ಎಜುಕೇಷನ್ ಟ್ರಸ್ಟ್‌ನ ಕಾಲೇಜ್ ಆಫ್ ಫಾರ್ಮಸಿ ಎಂಬ ಹೆಸರಿನಲ್ಲಿ ಹೊಸದಾಗಿ ಡಿ.ಫಾರ್ಮಸಿ ಕೋರ್ಸ್ ಪ್ರಾರಂಭಿಸಲು ಅನುಮತಿ ನೀಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ. (2)ರ ವರದಿಯಲ್ಲಿ, ಔಷಧ ನಿಯಂತ್ರಕರು (ಪ್ರ), ರಾಜ್ಯ ಔಷಧ ನಿಯಂತ್ರಣ ಇಲಾಖೆ, ಬೆಂಗಳೂರು ಇವರು ಶ್ರೀ ವೀರಭದ್ರಪ್ಪ ದೇವರ್ಕಲ್ ಎಜುಕೇಷನ್ ಟ್ರಸ್ಟ್ (ರಿ), ಯಾದಗಿರಿ ಇವರು ಹೊಸದಾಗಿ ಡಿ.ಫಾರ್ಮಸಿ ಕೋರ್ಸ್ ಪ್ರಾರಂಭಿಸಲು ಅನುಮತಿ ನೀಡುವ ವಿಷಯಕ್ಕೆ ಸಂಬಂಧಿಸಿದಂತೆ, ಸದಸ್ಯ ಕಾರ್ಯದರ್ಶಿ, ಪರೀಕ್ಷಾ ಪ್ರಾಧಿಕಾರ ಮಂಡಳಿ, ಬೆಂಗಳೂರು ಇವರು ಸಲ್ಲಿಸಿರುವ ಪರಿವೀಕ್ಷಣಾ ವರದಿಯಂತೆ ಸದರಿ ಸಂಸ್ಥೆಯು ಸರ್ವೆ ನಂ. 601/2, ಮಿನಿ ವಿಧಾನಸೌಧದ ಹತ್ತಿರ, ಚಿತ್ತಾಪುರ ರಸ್ತೆ, ಯಾದಗಿರಿ ಇಲ್ಲಿ ಭೋಗ್ಯಕ್ಕೆ ಕಟ್ಟಡವನ್ನು ಹೊಂದಿದ್ದು, ಸದರಿ ಕಟ್ಟಡವು ಡಿ.ಫಾರ್ಮಸಿ ಕೋರ್ಸ್ ನಡೆಸಲು ಸೂಕ್ತವಾಗಿದ್ದು, 60 ವಿದ್ಯಾರ್ಥಿಗಳ ಪ್ರಥಮ ಡಿ.ಫಾರ್ಮಸಿ ತರಗತಿಗಳನ್ನು ಚಾಲನೆ ಮಾಡಲು ಅಗತ್ಯವಿರುವ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಹೊಂದಿರುವುದರಿಂದ, ಇವರಿಗೆ 2019–20ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಪ್ರಥಮ ಡಿ.ಫಾರ್ಮಸಿ ಕೋರ್ಸ್ ಪ್ರಾರಂಭಿಸಲು ಉನ್ನತ ಸಮಿತಿಯಲ್ಲಿ ವರದಿಯನ್ನು ಪರಿಶೀಲಿಸಿ, ತೀರ್ಮಾನಿಸಬಹುದಾಗಿದೆ ಎಂಬ ಅಭಿಪ್ರಾಯವನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ (3)ರ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ಈ ಸಂಸ್ಥೆಗೆ 60 ವಿದ್ಯಾರ್ಥಿಗಳ ಪ್ರವೇಶಮಿತಿಯಲ್ಲಿ 2019–20ನೇ ಶೈಕ್ಷಣಿಕ ಸಾಲಿನಿಂದ ಡಿ.ಫಾರ್ಮಸಿ ಕೋರ್ಸ್ ಪ್ರಾರಂಭಿಸಲು ಅನುಮತಿ ನೀಡಲು ಶಿಫಾರಸು ಮಾಡಲಾಗಿದೆ.

. . . . 2

ಔಷಧ ನಿಯಂತ್ರಕರ (ಪ್ರ) ವರದಿ ಮತ್ತು ಲಭ್ಯವಿರುವ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು, ಶ್ರೀ ವೀರಭದ್ರಪ್ಪ ದೇವರ್ಕಲ್ ಎಜುಕೇಷನ್ ಟ್ರಸ್ಟ್ (ರಿ), ಯಾದಗಿರಿ ಇವರು ಯಾದಗಿರಿಯಲ್ಲಿ ಶ್ರೀ ವೀರಭದ್ರಪ್ಪ ದೇವರ್ಕಲ್ ಎಜುಕೇಷನ್ ಟ್ರಸ್ಟ್‌ನ ಕಾಲೇಜ್ ಆಫ್ ಫಾರ್ಮಸಿ ಎಂಬ ಹೆಸರಿನಲ್ಲಿ 2019-20ನೇ ಶೈಕ್ಷಣಿಕ ಸಾಲಿನಿಂದ 60 ವಿದ್ಯಾರ್ಥಿಗಳ ಪ್ರವೇಶಮಿತಿಯೊಂದಿಗೆ ಪ್ರಥಮ ಡಿ.ಫಾರ್ಮಸಿ ಕೋರ್ಸ್‌ನ್ನು ಹೊಸದಾಗಿ ಪ್ರಾರಂಭಿಸಲು ಫಾರ್ಮಸಿ ಕೌನ್ಸಿಲ್ ಆಫ್ ಇಂಡಿಯಾ, ನವದೆಹಲಿ ಹಾಗೂ ಅಗತ್ಯವಿರುವ ಇತರೆ ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆಯನ್ನು ಪಡೆಯುವ ಷರತ್ತಿಗೊಳಪಟ್ಟು ಅನುಮತಿ ನೀಡಲು ನಿರ್ಧರಿಸಿದೆ. ಆದುದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಆಕುಕ 325 ಪಿಟಿಡಿ 2018, ಬೆಂಗಳೂರು, ದಿನಾಂಕ:22.07.2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ವೀರಭದ್ರಪ್ಪ ದೇವರ್ಕಲ್ ಎಜುಕೇಷನ್ ಟ್ರಸ್ಟ್ (ರಿ), ಮಿನಿ ವಿಧಾನ ಸೌಧದ ಹತ್ತಿರ, ಚಿತ್ತಾಪುರ ರಸ್ತೆ, ಯಾದಗಿರಿ ಇವರು ಸರ್ವೆ ನಂ. 601/2, ಮಿನಿ ವಿಧಾನಸೌಧದ ಹತ್ತಿರ, ಚಿತ್ತಾಪುರ ರಸ್ತೆ, ಯಾದಗಿರಿ ಇಲ್ಲಿ 2019-20ನೇ ಶೈಕ್ಷಣಿಕ ಸಾಲಿನಿಂದ 60 (ಅರವತ್ತು) ವಿದ್ಯಾರ್ಥಿಗಳ ಪ್ರವೇಶ ಮಿತಿಯೊಂದಿಗೆ ಶ್ರೀ ವೀರಭದ್ರಪ್ಪ ದೇವರ್ಕಲ್ ಎಜುಕೇಷನ್ ಟ್ರಸ್ಟ್‌ನ ಕಾಲೇಜ್ ಆಫ್ ಫಾರ್ಮಸಿ ಎಂಬ ಹೆಸರಿನಲ್ಲಿ ಹೊಸದಾಗಿ ಪ್ರಥಮ ಡಿ.ಫಾರ್ಮಸಿ ಕೋರ್ಸ್ ಪ್ರಾರಂಭಿಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರದ ಅನುಮತಿ ನೀಡಲಾಗಿದೆ.

1. ಪ್ರಸ್ತಾಪಿಸಿರುವ ಡಿ.ಫಾರ್ಮಸಿ ಕಾಲೇಜು/ಕೋರ್ಸ್‌ನ್ನು ಹೊಸದಾಗಿ ಪ್ರಾರಂಭಿಸಲು ಫಾರ್ಮಸಿ ಕೌನ್ಸಿಲ್ ಆಫ್ ಇಂಡಿಯಾ, ನವದೆಹಲಿ ಇವರಿಂದ ಅನುಮೋದನೆಯನ್ನು ಪಡೆಯತಕ್ಕದ್ದು.
2. ಕಾಲೇಜನ್ನು ಪ್ರಾರಂಭಿಸುವ ಮುನ್ನ ಅಗತ್ಯವಿರುವ ಮೂಲ ಸೌಲಭ್ಯಗಳು ಹಾಗೂ ಸಿಬ್ಬಂದಿಯನ್ನು ಹೊಂದಿರತಕ್ಕದ್ದು.
3. ಸರ್ಕಾರದ ಸೀಟುಗಳ ಹಂಚಿಕೆಯಲ್ಲಿ ಪ್ರವೇಶಾವಕಾಶಕ್ಕೆ ಹಾಲಿ ಜಾರಿಯಲ್ಲಿರುವ ನಿಯಮಗಳಿಗೆ ಸಂಸ್ಥೆಯು ಬದ್ಧವಾಗಿರಬೇಕು.
4. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು/ಫಾರ್ಮಸಿ ಕೌನ್ಸಿಲ್ ಆಫ್ ಇಂಡಿಯಾ ನಿಗದಿಪಡಿಸಿರುವ ಪರಿನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
5. ರಾಜ್ಯ/ಕೇಂದ್ರ ಸರ್ಕಾರವು ಕಾಲಕಾಲಕ್ಕೆ ನೀಡುವ ಸೂಚನೆ ಹಾಗೂ ಆದೇಶಗಳನ್ನು ಪಾಲಿಸತಕ್ಕದ್ದು.
6. ಈ ಕಾಲೇಜಿಗೆ ಕರ್ನಾಟಕ ಸರ್ಕಾರದ ವತಿಯಿಂದ ಯಾವುದೇ ರೀತಿಯ ಅನುದಾನ, ಆರ್ಥಿಕ ಸೌಲಭ್ಯಗಳನ್ನು ನೀಡಲಾಗುವುದಿಲ್ಲ. ಇದು ಶಾಶ್ವತ ಅನುದಾನ ರಹಿತ ಷರತ್ತಿಗೆ ಒಳಪಟ್ಟಿರುತ್ತದೆ.
7. ಸರ್ಕಾರ/ಪ್ರಾಧಿಕಾರದ ಪೂರ್ವಾನುಮತಿಯಿಲ್ಲದೆ ಯಾವುದೇ ಕಾರಣಕ್ಕೂ ಕಾಲೇಜಿನ ಹೆಸರು ಮತ್ತು ವಿಳಾಸವನ್ನು ಬದಲಾಯಿಸುವಂತಿಲ್ಲ.
8. ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸುವ ಕೋರ್ಸ್‌ನ ಶುಲ್ಕಗಳನ್ನು ಮಾತ್ರ ವಿದ್ಯಾರ್ಥಿಗಳಿಂದ ಪಡೆಯತಕ್ಕದ್ದು ಮತ್ತು ಸಕ್ಷಮ ಪ್ರಾಧಿಕಾರದಿಂದ ಮಂಜೂರಾದ ಸೀಟುಗಳಲ್ಲಿ ಕಾಲಕಾಲಕ್ಕೆ ಸರ್ಕಾರವು ನಿಗದಿಪಡಿಸುವ ಅನುಪಾತದಲ್ಲಿ ಸರ್ಕಾರಕ್ಕೆ ಸೀಟುಗಳನ್ನು ಬಿಟ್ಟುಕೊಡತಕ್ಕದ್ದು.

19



9. ಇಂದಿನಿಂದ 05 ವರ್ಷಗಳ ಒಳಗಾಗಿ ಸಂಸ್ಥೆಯು ಕಡ್ಡಾಯವಾಗಿ ಸ್ವಂತ ಕಟ್ಟಡವನ್ನು ನಿರ್ಮಿಸಿಕೊಳ್ಳತಕ್ಕದ್ದು.
10. ಸರ್ಕಾರ ವಿಧಿಸಿರುವ ಮೇಲ್ಕಂಡ ಯಾವುದೇ ಒಂದು ಷರತ್ತನ್ನು ಉಲ್ಲಂಘಿಸಿದ್ದಲ್ಲಿ ಸಂಯೋಜನೆ/ಮಂಜೂರಾತಿಯನ್ನು ಹಿಂತೆಗೆದುಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾರತೀಯ ವೈದ್ಯ ಪದ್ಧತಿ)

<u>ಇವರಿಗೆ:</u>

1) ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
2) ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ ಟಿ.ಬ್ಲಾಕ್, ಜಯನಗರ, ಬೆಂಗಳೂರು.
3) ಸದಸ್ಯ ಕಾರ್ಯದರ್ಶಿ, ಪರೀಕ್ಷಾ ಪ್ರಾಧಿಕಾರ ಮಂಡಳಿ, ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಪಿ. ಕಾಳಿಂಗರಾವ್ ರಸ್ತೆ, ಬೆಂಗಳೂರು-560 027.
4) ಅಧ್ಯಕ್ಷರು, ಶ್ರೀ ವೀರಭದ್ರಪ್ಪ ದೇವರ್ಕಲ್ ಎಜುಕೇಷನ್ ಟ್ರಸ್ಟ್ (ರಿ), ಮಿನಿ ವಿಧಾನ ಸೌಧದ ಹತ್ತಿರ, ಚಿತ್ತಾಪುರ ರಸ್ತೆ, ಯಾದಗಿರಿ.

<u>ಪ್ರತಿಗಳು:-</u>

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು-1.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಪತ್ರಾಂಕಿತ ಆಪ್ತ ಸಹಾಯಕರಿಗೆ.
3. ಸರ್ಕಾರದ ಉಪ ಕಾರ್ಯದರ್ಶಿ-3, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರಿಗೆ.
4. ಶಾಖೆಯ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.